# ಮಹಾ ಸಾಂಸ್ಕೃತಿಕ ಉತ್ಸವ



ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಕನ್ನಡದ ಕಲೆ, ಸಂಸ್ಕೃತಿಗಳನ್ನು ದೇಶ ವಿದೇಶದ ಪ್ರವಾಸಿಗರಿಗೆ ಮತ್ತು ಸ್ಥಳೀಯ ಜನರಿಗೆ "ಮಹಾ ಸಾಂಸ್ಕೃತಿಕ ಉತ್ಸವ" ಎನ್ನುವ ಕಾರ್ಯಕ್ರಮದ ಅಡಿಯಲ್ಲಿ ಪರಿಚಯಿಸಲಾಗುತ್ತಿದೆ. ಫೆಬ್ರವರಿ 7ರಿಂದ ಉದ್ಘಾಟನೆಯಾಗುವ ಸಾಂಸ್ಕೃತಿಕ ಉತ್ಸವ ಫೆಬ್ರವರಿ 26ರವರೆಗೆ ನಡೆಯಲಿದೆ. ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕಲಾವಿದರ ಕಾರ್ಯಕ್ರಮಗಳ ಜೊತೆಗೆ ಸ್ಥಳೀಯ ಕಲೆ ಸಂಸ್ಕೃತಿಗಳ ಪರಿಚಯಕ್ಕೆ ಕೂಡ ಇಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬಾಹುಬಲಿಯ ಜೀವನ ಬಿಂಬಿಸುವ ಲೇಸರ್ ಪ್ರದರ್ಶನ ಕೂಡ ಪ್ರಮುಖ ಆಕರ್ಷಣೆಯಾಗಿ ಹೊರ ಹೊಮ್ಮಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಾಡಿನ ಜನಪರ ಕಲೆಗಳ ವೈಭವ ಮತ್ತು ವೈವಿಧ್ಯತೆ ಬಿಂಬಿಸುವ "ಜನಪದ ಜಾತ್ರೆ" ಕಾರ್ಯಕ್ರಮ ಏರ್ಪಡಿಸಲಾಗಿದ್ದು ಇದು ಜನಮನ ಸೂರೆಗೊಳ್ಳಲಿದೆ.

ಮಹಾಮಸ್ತಕಾಭಿಷೇಕ ಒಂದು ಧಾರ್ಮಿಕ ಕಾರ್ಯಕ್ರಮವಾಗಿರುವ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಒಂದು ಗಾಂಭೀರ್ಯತೆ ದೊರಕಿಸಿಕೊಡಲು ಗಮನಹರಿಸಲಾಗಿದೆ. ಆದಾಗ್ಯೂ ಜನರ ಮನರಂಜನೆಗಾಗಿ ಕೆಲವು ಜನಪ್ರಿಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಂದು ದಿನ ಪ್ರಧಾನವಾಗಿ ಮಹಿಳಾ ಕಲಾವಿದರಿಗೆ, ಮತ್ತೊಂದು ದಿನ ಮಕ್ಕಳ ಪ್ರತಿಭೆಗೆ ಮತ್ತು ಮಗದೊಂದು ದಿನ ಯುವ ಕಲಾವಿದರಿಗೆ ಮೀಸಲಾಗಿದೆ.

ಸಾಮಾನ್ಯ ಜನರು ಅಭಿಷೇಕದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿಕೊಡುವ ಸಲುವಾಗಿ ಆಗಸ್ಟ್ ವರೆಗೂ ಪ್ರತಿ ಭಾನುವಾರ ಮಹಾಮಸ್ತಕಾಭೀಷೇಕ ನಡೆಯಲಿದೆ. ಭಕ್ತರು ಪ್ರತಿ ಭಾನುವಾರ ಮಸ್ತಕಾಭಿಷೇಕದ ಅದ್ಭುತ ಕ್ಷಣಗಳನ್ನು ಕಣ್ತುಂಬಿಕೊಳ್ಳಬಹುದು.

★ ಮಹೋತ್ಸವಕ್ಕೆ ವಿದೇಶದಿಂದಲೂ ಯಾತ್ರಾರ್ಥಿಗಳು ಬರುತ್ತಿದ್ದಾರೆಯೇ?

ಪ್ರತಿನಿತ್ಯ ಹೊರ ರಾಜ್ಯಗಳಿಂದ ತ್ಯಾಗಿಗಳು, ಯಾತ್ರಾರ್ಥಿಗಳು, ಭಕ್ತರು, ಪ್ರವಾಸಿಗರು ಬರುತ್ತಿದ್ದಾರೆ. ವಿದೇಶದಿಂದಲೂ ಬರುವವರಿದ್ದಾರೆ.

★ ಕಳಶಗಳ ಹರಾಜಿನಿಂದ ಬಂದ ಹಣ ಏನು ಮಾಡುತ್ತೀರಾ?

ಕಳೆದ ಮಹಾಮಸ್ತಕಾಭಿಷೇಕದಲ್ಲಿ ಮೊದಲ ಕಳಶಾಭಿಷೇಕ ಮಾಡಿದ್ದ ಪಾಟ್ನಿ ಪರಿವಾರದವರು ರೂ.108 ಲಕ್ಷ ನೀಡಿದ್ದು, ಅದರಲ್ಲಿ ಮಕ್ಕಳ ಆಸ್ಪತ್ರೆ ನಿರ್ಮಾಣ ಮಾಡಲಾಗಿತ್ತು. ಈ ಆಸ್ಪತ್ರೆಯಲ್ಲಿ ನಿತ್ಯ 160ಕ್ಕೂ ಅಧಿಕ ಮಕ್ಕಳಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಈ ಬಾರಿ ಯಾರು ಹೆಚ್ಚು ಸೇವೆಯ ಜವಾಬ್ದಾರಿ ಹೊತ್ತುಕೊಳ್ಳುತ್ತಾರೋ ಅವರಿಗೆ ಮೊದಲ ಕಳಶಾಭಿಷೇಕದ ಅವಕಾಶ ಮಾಡಿಕೊಡಲು ಉದ್ದೇಶಿಸಲಾಗಿದೆ. ಈ ಬಾರಿ ಕಳಶ ಅಭಿಷೇಕದಿಂದ ಸಂಗ್ರಹವಾಗುವ ಹಣವನ್ನು 200 ಹಾಸಿಗೆಗಳ ಆಸ್ಪತ್ರೆಯನ್ನು ಜನಸೇವೆಗೆ ಸಮರ್ಪಿಸಲಾಗುವುದು. ಪರೋಪಕಾರ ಹಾಗೂ ಭಕ್ತಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹೀಗಾಗಿ, ಭಕ್ತಿಯ ಜತೆಗೆ ಪರೋಪಕಾರಕ್ಕೂ ಆದ್ಯತೆ ನೀಡಲಾಗಿದೆ.

★ ಈ ಬಾರಿಯ ಮಹಾಮಸ್ತಕಾಭಿಷೇಕದ ಸಂದೇಶ?

ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ, ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ ಎಂಬುದು ಈ ಬಾರಿ ಮಹೋತ್ಸವದ ಘೋಷವಾಕ್ಯವಾಗಲಿವೆ. ಎಲ್ಲರೂ ಭಕ್ತಿ, ವಿನಯದಿಂದ ಮಹಾಮಸ್ತಕಾಭಿಷೇಕದಲ್ಲಿ ಮೂಡುವ ಬಾಹುಬಲಿ ಸಂದೇಶವನ್ನು ಅನುಷ್ಠಾನಗೊಳಿಸಬೇಕು. ಅಹಿಂಸೆಗೆ ಒತ್ತು ನೀಡಬೇಕು. ತ್ಯಾಗ ಮನೋಭಾವದಿಂದ ಬಾಳಬೇಕು. ಸಂಪೂರ್ಣ ತ್ಯಾಗ ಸಾಧ್ಯವಾಗದಿದ್ದರೂ ಯಥಾಶಕ್ತಿ ತ್ಯಾಗ ಮಾರ್ಗ ಅನುರಿಸಬೇಕು. ತ್ಯಾಗ ಅಂದರೆ ಬಹಿರಂಗ ತ್ಯಾಗ ಮಾತ್ರವಲ್ಲ.

★ ಬೆಟ್ಟಕ್ಕೆ ಹೊಸ ಮೆಟ್ಟಿಲುಗಳ ಅವಶ್ಯಕತೆ ಇತ್ತೆ?

ವರ್ಷದಿಂದ ವರ್ಷಕ್ಕೆ ಕ್ಷೇತ್ರಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ. ಮಹೋತ್ಸವದ ವೇಳೆ ಪ್ರತಿ ದಿನ ಅಂದಾಜು 3 ಲಕ್ಷ ಭಕ್ತರು ಭೇಟಿ ನೀಡುತ್ತಾರೆ. ಬೆಟ್ಟಕ್ಕೆ ಡೋಲಿ ತೆಗೆದುಕೊಂಡು ಹೋಗಲು ತೊಂದರೆ ಆಗುತ್ತಿದೆ. ತಾಂತ್ರಿಕ ಕಾರಣದಿಂದ ರೋಪ್ವೇಗೂ ಅನುಮತಿ ದೊರೆಯಲಿಲ್ಲ. ಹೀಗಾಗಿ ಹೆಚ್ಚುವರಿಯಾಗಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ.

★ ಮಸ್ತಕಾಭಿಷೇಕ 12 ವರ್ಷಗಳಿಗೊಮ್ಮೆ ನಡೆಸುವ ಹಿನ್ನೆಲೆಯೇನು?

ಕ್ರಿ.ಶ. 981ರ ಮಾ.13ರಂದು ಬಾಹುಬಲಿ ಪ್ರತಿಷ್ಠಾಪನೆ ಆಯಿತು. ಅಂದೇ ಮೊದಲ ಅಭಿಷೇಕ ನೆರವೇರಿತು. ಮುಂದಿನ ಮಹೋತ್ಸವ ಪ್ರತಿ ವರ್ಷ ಮಾಡಬೇಕೆ ಅಥವಾ 6 ವರ್ಷಕ್ಕೊಮ್ಮೆ ಮಾಡಬೇಕೆ ಎಂಬ ಚರ್ಚೆಯಾದಾಗ, ಚಾವುಂಡರಾಯನ ಗುರು 12 ವರ್ಷಕ್ಕೊಮ್ಮೆ ಮಾಡುವಂತೆ ಸೂಚಿಸಿದರು. 12 ವರ್ಷಕ್ಕೊಮ್ಮೆ ಆಚರಿಸುವಂತೆ ಗೊಮ್ಮಟೇಶ್ವರ ಮೂರ್ತಿಯ ನಿರ್ಮಾತೃ, ಗಂಗ ಸಾಮ್ರಾಜ್ಯದ ಸೇನಾಧಿಪತಿ ಹಾಗೂ ಮಹಾಮಂತ್ರಿಯಾಗಿದ್ದ ಚಾವುಂಡರಾಯ ಆದೇಶಿಸಿದ. ಆಗಿನ ಕಾಲದಲ್ಲಿ ಅದು ಸರ್ಕಾರಿ ಆದೇಶವೇ ಆಗಿತ್ತು. ಅದರಂತೆ ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಮೈಸೂರು, ಒಡೆಯರು, ಬ್ರಿಟಿಷರು ಹಾಗೂ ಸ್ವಾತಂತ್ರ್ಯ ನಂತರದಲ್ಲೂ ಸರ್ಕಾರಗಳು ನಿರಂತರವಾಗಿ ಮಹಾಮಸ್ತಕಾಭಿಷೇಕ ನಡೆಸುತ್ತಾ ಬಂದಿವೆ. ಒಂದು ಸಾವಿರ ವರ್ಷ ಕಳೆದರೂ ಪರಂಪರೆ ಮುಂದುವರೆದಿದೆ.

★ ನೆನಪು ಇಟ್ಟುಕೊಳ್ಳುವ ಮಸ್ತಕಾಭಿಷೇಕ?

1910ರಲ್ಲಿ ನಡೆದ ಮಹಾಮಸ್ತಕಾಭಿಷೇಕದ ವೇಳೆ ಇಂಗ್ಲಿಷ್ ಪತ್ರಿಕೆಯೊಂದು ಶ್ರವಣಬೆಳಗೊಳದಿಂದ ಪಾರಿವಾಳದ ಮೂಲಕ ಚೆನ್ನೈಗೆ ಮಾಹಿತಿ ರವಾನಿಸಿ, ವರದಿ ಪ್ರಕಟಿಸಿದ್ದು ಚರಿತ್ರಾರ್ಹ ಸಾಧನೆ.